ವಾರದ ಪತ್ರ

## ಹೊಣೆಗಾರಿಕೆಯ ನಿರ್ಲಕ್ಷ್ಯ

ಈಚೆಗಷ್ಟೇ ಶಾಸಕರ ರಾಜೀನಾಮೆಯಿಂದ ಆರಂಭಗೊಂಡ 'ಕರ್ನಾಟಕ ರಾಜಕೀಯ ವಿಪ್ಲವ'ವನ್ನು ನಮ್ಮ ಸುದ್ದಿ ವಾಹಿನಿಗಳು ಮಸಾಲೆ ಬೆರೆಸಿ ವೀಕ್ಷಕರಿಗೆ ಅಹರ್ನಿಶಿ ಉಣಬಡಿಸಿದವು. ನಿಮಿಷಕ್ಕೊಂದರಂತೆ ಪೊಳ್ಳು ಬ್ರೇಕಿಂಗ್ ನ್ಯೂಸ್ ತೋರಿಸುತ್ತ ಬಡಬಡಿಸಿದವು. ಆದರೆ, ರಾಜ್ಯದಲ್ಲಿ ಇದೇ ದುಸ್ಥಿತಿ ಮುಂದುವರಿದರೆ ಆಗ ರಾಜ್ಯದ ಆಡಳಿತ ಮತ್ತು ಅಭಿವೃದ್ಧಿಗಳ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಕುರಿತು ಯಾವ ಸುದ್ದಿವಾಹಿನಿಯೂ ಮೌಲಿಕ ವಿಚಾರವನ್ನು ಬಿತ್ತರಿಸಲಿಲ್ಲ. ನಮ್ಮ ಸುದ್ದಿವಾಹಿನಿಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ಎಷ್ಟರಮಟ್ಟಿಗೆ ನಿರ್ಲಕ್ಷಿಸಿವೆ ಎಂಬುದನ್ನು ಅವುಗಳ ಈ ನಡೆಯೇ ತೋರಿಸುತ್ತದೆ.

—ಎಚ್. ಆನಂದರಾಮ ಶಾಸ್ತ್ರೀ ಬೆಂಗಳೂರು

## ಪಾತ್ರಗಳೂ ಕೆಟ್ಟ ಪ್ರಸಂಗಗಳೂ...

ಟೀವಿ ಸಿದ್ಧಸೂತ್ರಗಳನ್ನು ಹಿಡಿದು ಧಾರಾವಾಹಿಗಳನ್ನು ರೂಪಿಸುತ್ತಿವೆ. ಸ್ತ್ರೀಯರು ಖಳನಾಯಕಿಯರಾಗಿ ಅಡಿಯಿಂದ ಮುಡಿಯವರೆಗೆ ಅಲಂಕಾರ, ಮೊಬೈಲ್‌ಧಾರಿಯರಾಗಿ, ಆ ಮೊಬೈಲ್‌ನಲ್ಲೂ ಏನೇನೋ ಸಂಚು, ಎಚ್ಚರಿಕೆಗಳು ಸಂಬಂಧಿತರಿಗೆ ಪ್ರಸಾರ ಮಾಡುತ್ತಿರುವ ದೃಶ್ಯಗಳು ಸರ್ವೇ ಸಾಮಾನ್ಯ. ಕುಡಿಯುವ ಹಾಲಿಗೆ ಅಮಲು ಬರುವ ಮಾತ್ರೆ ಹಾಕಿ ಕುಡಿಸಿ ಬೇಡದ ಭಾವಚಿತ್ರಗಳ ಪ್ರಸಾರ, ಎಣ್ಣೆ ಚೆಲ್ಲಿ ಮೆಟ್ಟಲುಗಳಿಂದ ಜಾರಿ ಬೀಳಿಸುವುದು. ಚಾಡಿಯ ಮಾತುಗಳ ಪ್ರಸಾರ, ರಪ್ಪನೆ ಕೆನ್ನೆಗೆ ಬಾರಿಸುವುದು. ತಲೆ ಮೇಲೆ ಕಲ್ಲು, ಹೂಕುಂಡಗಳನ್ನು ಬೀಳಿಸುವುದು, ಕೊನೆಗೆ ಗುಂಡೇಟು ಇವು ಖಳನಾಯಕಿಯರ ಕೈತುತ್ತು!

ಒಂದೆಡೆ ಸೊಗಸಾದ ಕಾರ್ಯಕ್ರಮ. ಉತ್ತಮ ನಿರೂಪಕರು, ಕಹಿತುತ್ತು ಎಂದರೆ ಅವರ ಆಗೀಗಿನ ಪ್ರೇಮ ಪ್ರಲಾಪ– ನಿರ್ಣಾಯಕರೊಬ್ಬರಿಗೆ! ನಿರೂಪಕರ ಅನನ್ಯ ನಿರೂಪಣಾ ಶೈಲಿಗೆ ಮೆಚ್ಚಬೇಕೋ? ಪ್ರೇಮ ಪ್ರಲಾಪಕ್ಕೆ ಬೆಚ್ಚಬೇಕೋ? ತಿಳಿಯದಂತಾಗಿದೆ. ಒಟ್ಟಿನಲ್ಲಿ ಹೆಂಗಸರಲ್ಲಿ ವಿವೇಚನೆ, ಮಾರ್ದವತೆ ಕಡಿಮೆಯಾಗುತ್ತಿದೆಯೇ ಎಂದು ಚಿಂತಿಸುವಂತಾಗಿದೆ.

ಬಡ ಮಕ್ಕಳಿಗೆ ಆರ್ಥಿಕ ನೆರವು, ಬಡ ರೋಗಿಗಳಿಗೆ ಉತ್ತಮ ಚಿಕಿತ್ಸೆಯ ವ್ಯವಸ್ಥೆ, ಅಶಕ್ತ ವೃದ್ಧರಿಗೆ ಸಹಕಾರ, ಸ್ವಸಾಮರ್ಥ್ಯದಿಂದ ಬದುಕಿನ ಪಥ ಕಂಡುಕೊಳ್ಳುವುದು, ಸಕಾರಾತ್ಮಕ ಸ್ವಾಭಿಮಾನಿ ಜೀವನಮುಖೀ ಚಿಂತನೆಗಳು ಇವನ್ನೆಲ್ಲ ಧಾರಾವಾಹಿಗಳಲ್ಲಿ ಅಳವಡಿಸಿಕೊಂಡರೆ ಸ್ಫೂರ್ತಿದಾಯಕವಲ್ಲವೆ?

—ಸುಶೀಲಾ ರಾವ್, ಉಡುಪಿ

## ಬುದ್ಧಿ ಮತ್ತು ಅದೃಷ್ಟ ಪರೀಕ್ಷೆ

ಕನ್ನಡದ ಕೋಟ್ಯಧಿಪತಿಯನ್ನು ನಟ ಪುನೀತ್ ರಾಜ್‌ಕುಮಾರ್ ಅರ್ಥಪೂರ್ಣವಾಗಿ ನಿರೂಪಿಸುತ್ತಿದ್ದಾರೆ. ಸಾಮಾನ್ಯ ಜ್ಞಾನವಿರುವ ಎಲ್ಲ ವರ್ಗದ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ನಿರೂಪಕರ ಲವಲವಿಕೆ ಸ್ಪರ್ಧಿಗಳನ್ನು ಹುರಿದುಂಬಿಸುತ್ತದೆ. ಅವರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಲೂ ಸಹಾಯವಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಜಾಣ್ಮೆ ಇದ್ದರೆ ಆರ್ಥಿಕ ಸ್ವಾವಲಂಬನೆ ಸಾಧಿಸಬಹುದು ಎಂಬುದಕ್ಕೆ ಸ್ಪರ್ಧಿಗಳೇ ಸಾಕ್ಷಿಯಾಗಿದ್ದಾರೆ. ಬುದ್ಧಿಶಕ್ತಿಯ ಜೊತೆಗೆ ಅದೃಷ್ಟ ಪರೀಕ್ಷೆಯ ಕಾರ್ಯಕ್ರಮ ಇದಾಗಿದೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಮಜಾ ಕೊಡುವ 'ಟಾಕೀಸ್'

ಕಲರ್ಸ್ ಸೂಪರ್‌ನ 'ಮಜಾ ಟಾಕೀಸ್' ಚೆನ್ನಾಗಿ ಬರ್‍ತಾ ಇದೆ. ಸಮಯೋಚಿತ ಹಾಸ್ಯ, ಮಾತಿನ ಶೈಲಿ ತುಂಬಾ ಚೆನ್ನಾಗಿದೆ. ತಂಡದಲ್ಲಿರುವ ಮಂಡ್ಯ ರಮೇಶ್, ಪವನಾ, ಅಪರ್ಣಾ ಮತ್ತು ಶ್ವೇತಾ ಎಲ್ಲರೂ ಪ್ರತಿಭಾವಂತರು. ಒಂದು ಕಂತಿನಲ್ಲಿ ಮಂಡ್ಯ ರಮೇಶ್ ಅವರನ್ನು ಪದೇ ಪದೇ 'ನಾಯಿ, ನಾಯಿ' ಅಂತ ಸಂಬೋಧಿಸುವುದನ್ನು ನೋಡುವ ನಮಗೆ ಕಿರಿ ಕಿರಿ ಅನಿಸಿತು. ಬಳಸುವ ಭಾಷೆ ಸುಂದರವಾಗಿ ಅರ್ಥಪೂರ್ಣವಾಗಿದ್ದರೆ ಈ ರಿಯಾಲಿಟಿ ಶೋ ಇನ್ನು ಪ್ರೇಕ್ಷಕರ ಮನ ಗೆಲ್ಲುವುದರಲ್ಲಿ ಸಂದೇಹವಿಲ್ಲ. ನಯನಾ ಅವರ ಅಭಿನಯವು ನೈಜತೆಗೆ ಹತ್ತಿರವಿದ್ದರೆ ಚೆನ್ನಾಗಿರುತ್ತದೆ.

ಕೊನೆಯಲ್ಲಿ ಸೃಜನ್ ಲೋಕೇಶ್ 'ಗಿಡ ಬೆಳೆಸಿ, ನೀರು ಉಳಿಸಿ' ಎಂಬ ಸಂದೇಶದೊಂದಿಗೆ ಬಂದ ಅತಿಥಿಗಳಿಗೆ ಸಸಿಗಳನ್ನು ಉಡುಗೊರೆಯಾಗಿ ಕೊಡುವುದು ನಿಜಕ್ಕೂ ಅಭಿನಂದನೆಗೆ ಅರ್ಹ.

—ಮೇಘನಾ ಜಯತೀರ್ಥ ಜಹಗೀರದಾರ, ಧಾರವಾಡ

## ಮುಗಿದ 'ಜೋಡಿ ಹಕ್ಕಿ' ಕಥೆ

ಝೀನ 'ಜೋಡಿ ಹಕ್ಕಿ' ಅನಿರೀಕ್ಷಿತವಾಗಿ ಮುಕ್ತಾಯಗೊಂಡಿದ್ದು ಅಚ್ಚರಿಯನ್ನು ಹುಟ್ಟಿಸಿತು. ಕಡಿಮೆ ಕಂತಿನಲ್ಲಿ ಚೊಕ್ಕಟವಾಗಿ ಮುಗಿಸಿದ್ದಾರೆ. ವಾಸ್ತವತೆಯ ಕೆಲವು ಸನ್ನಿವೇಶಗಳು ಅತಿರೇಕ ಎನಿಸಿದರೂ ಸಹ್ಯವಾಗಿದ್ದವು. ನಂದಿತಾಳನ್ನು ಸಾವಿಗೆ ತಳ್ಳಿ ಮೋಹಿನಿಯ ರೂಪದಲ್ಲಿ ಜಾನಕಿಯನ್ನು ಕಾಡುತ್ತಾಳೆ ಎಂದು ನಾವು ಭಾವಿಸಿದ್ದೆವು. ಆದರೆ ತೆರೆಯ ಮೇಲೆ ಕೆಲವು ವರ್ಷಗಳ ನಂತರ ಎಂದು ಮಾಡಿ ಬಂದು ನಂದಿತಾಳ ಫೋಟೊ ಕಂಡು ಬಂದಿತು. ಅಂತೂ ದೊಡ್ಡ ಮನೆಗೆ ನಂದಿತಾಳ ಕಾಟ ತಪ್ಪಿ ನೆಮ್ಮದಿ ಮೂಡಿಸಿದ್ದಾರೆ.

—ಪ. ಚಂದ್ರಕುಮಾರ ಗೌನಹಳ್ಳಿ

## ಎಲೆಮರೆಯೂ ಮುನ್ನೆಲೆಗೆ ಬರಲಿ

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ವೀಕೆಂಡ್ ವಿತ್ ರಮೇಶ್' ನಾಲ್ಕನೇ ಆವೃತ್ತಿಯಲ್ಲಿ ಧರ್ಮಾಧಿಕಾರಿಯವರಿಂದ ಆರಂಭವಾಗಿ ಕಡೆಯಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ ಅವರಿಗೆ ಕೊನೆಯಾಯಿತು. ಮೊದಮೊದಲು ಸಿನಿಮಾ, ರಂಗಭೂಮಿ ಸಾಧಕರನ್ನು ಪರಿಚಯಿಸುವ ಕ್ರಮ ಸಾಗಿ ಬಂದು, ಇದೀಗ ಸಮಾಜದ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸುತ್ತಿರುವುದು ವೀಕ್ಷಿಸಲು ಹಿತವೆನಿಸಿತು.

ಇನ್ನೂ ಅನುಪಮ ಸಾಧನೆಗೈದು ಎಲೆಮರೆಯ ಕಾಯಂತೆ ಪ್ರಚಾರದಿಂದ ದೂರವಿರುವ ಅದರಲ್ಲೂ ಸಾಮಾನ್ಯರಾಗಿದ್ದು ಅಸಾಮಾನ್ಯ ಕೆಲಸ ಮಾಡುತ್ತಿರುವವರನ್ನು ಗುರುತಿಸುವ ಕಲಸವೂ ಆಗಬೇಕಿದೆ.

—ರುದ್ರಮೂರ್ತಿ ಎಂ.ಜೆ. ಚಿತ್ರದುರ್ಗ

## ಸರ್ಜಿಕಲ್ ಸ್ಟ್ರೈಕ್ ಅವಶ್ಯಕ!

'ಅಗ್ನಿಸಾಕ್ಷಿ'ಯ ನಟಿಭಯಂಕರಿ ಚಂದ್ರಿಕಾಳ ನೆರವಿಗೆ ರಾಧಾರಮಣದ ನಟಿಭಯಂಕರಿ ಸಿತಾರಾ ಧಾವಿಸಿ ಸಹಕರಿಸಿದಂತೆಯೇ, 'ರಾಧಾರಮಣ'ದ ರಮಣನು ಅಗ್ನಿಸಾಕ್ಷಿಯ ಸನ್ನಿಧಿಯ ನೆರವಿಗೆ ಧಾವಿಸಿ ಸರ್ಜಿಕಲ್ ಸ್ಟ್ರೈಕ್ ನಡೆಸಿ ನಟಿಭಯಂಕರಳಾದ ಚಂದ್ರಿಕಾಳನ್ನು ಸಂಹರಿಸಿ ಅಗ್ನಿ ಸಾಕ್ಷಿಗೆ ಅಂತ್ಯಹಾಡಲಿ...! ಅಂತೆಯೇ ಅಗ್ನಿಸಾಕ್ಷಿಯ ಸಿದ್ದಾರ್ಥನು ರಾಧಾರಮಣದ ರಮಣನ ಸಹಾಯಕ್ಕೆ ಧಾವಿಸಿ ಸರ್ಜಿಕಲ್ ಸ್ಟ್ರೈಕ್ ನಡೆಸಿ ನಟಿಭಯಂಕರಳಾದ ಸಿತಾರಾಳನ್ನು ಸಂಹರಿಸಿ ರಾಧಾರಮಣಕ್ಕೆ ಮಂಗಳ ಹಾಡಲಿ! ಆ ಮೂಲಕ ಕಿರುತೆರೆಯ ಕಿರುಕುಳ ನೀಡುವವರಿಗೆ ಮುಕ್ತಿ ನೀಡಲಿ!

—ಪಿ.ಜೆ. ರಾಘವೇಂದ್ರ, ಮೈಸೂರು

## ಆತ್ಮವಿಮರ್ಶೆ ಅಗತ್ಯ

ಪ್ರಸ್ತುತ ಕನ್ನಡದಲ್ಲಿ ಹಲವು ಸುದ್ದಿವಾಹಿನಿಗಳಿವೆ. ಬಹುತೇಕ ವಾಹಿನಿಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ, ವಾಣಿಜ್ಯ ಸುದ್ದಿಗಳ ಬಗ್ಗೆ ಗಮನ ಕೊಡುವುದೇ ಇಲ್ಲ. ಕರ್ನಾಟಕದ ಶಾಸಕರ ರಾಜೀನಾಮೆಯ ಊಹಾಪೋಹ, ಸಂಪುಟ ವಿಸ್ತರಣೆಯ ಬಗ್ಗೆ ಕ್ಷಣ ಕ್ಷಣದ ಸುದ್ದಿ ಹಾಗೂ ಅದರ ವಿಮರ್ಶೆಯನ್ನು ಎಲ್ಲಾ ವಾಹಿನಿಗಳಲ್ಲಿ ಆವರಿಸಿಕೊಂಡಿರುತ್ತವೆ. ಅದೇ ಸುದ್ದಿಯನ್ನು ನಿರಂತ ಪ್ರಸಾರ ಮಾಡುವ ಬದಲು ಜನರಿಗೆ ಉಪಯೋಗ ಆಗುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡುವ ಬಗ್ಗೆ ಆತ್ಮ ವಿಮರ್ಶೆ ಮಾಡುವ ಅಗತ್ಯವಿದೆ.

—ಪ್ರಫುಲ್ಲ ಪುಣೆ